ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಡಿಪ್ಲೊಮಾ ಹೋಲ್ಡರ್ಸ್ ಸಾವಿರಾರು ಜನರು ಕೆಲಸವಿಲ್ಲದೆ ಬೀದಿಬೀದಿ ಅಲೆಯುತ್ತಿದ್ದಾರೆ. ಅವರು ಯಾವುದೋ ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಬಂದಿದ್ದಾರೆಂದು ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಅನ್ಯಾಯಮಾಡಿದ್ದಾರೆ. ಅದನ್ನು ಕೂಡಲೇ ತಪ್ಪಿಸುವುದಕ್ಕೆ ತಕ್ಕ ಕ್ರಮವನ್ನು ಏನು ತೆಗೆದುಕೊಂಡಿದ್ದೀರಿ?

ಶ್ರೀ ಕೆ. ಲಕ್ಕಪ್ಪ.—ಆ ರೀತಿಯಾಗಿ ಮಾಡಿಲ್ಲ. ಆದ್ದರಿಂದ ಅದನ್ನು ಸರಿಪಡಿಸುವ ಪ್ರಮೇಯವೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಈಗಿನ ನಿಯಮದ ಪ್ರಕಾರ ಕೆಲವು ಅನ್ಯಾಯಗಳು ಆಗಿವೆ. ಈಗ ಇರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಕಳೆದ ೧೦ ವರ್ಷಗಳಲ್ಲಿ ಎಷ್ಟೋಸಾರಿ ಬದಲಾವಣೆ ಯಾಗಿವೆ. ಮಂತ್ರಿಮಂಡಲ ಬದಲಾವಣೆಯಾದಂತೆಲ್ಲಾ ಅದೂ ಬದಲಾವಣೆಯಾಗುತ್ತದಲ್ಲವೇ?

ಶ್ರೀ ಕೆ ಲಕ್ಕಪ್ಪ.—ಯಾವ್ಯಾವಾಗ ಬದಲಾವಣೆ ಆಯಿತೋ ಆ ಮಾಹಿತಿ ನನ್ನಲ್ಲಿಲ್ಲ. ಪದೇಪದೇ ಆ ರೀತಿ ಬದಲಾವಣೆಯಾಗಿಲ್ಲ. ಬಹಳ ವರ್ಷಗಳ ನಂತರ ಈ ರೀತಿ ಬದಲಾವಣೆಯಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—(ಅ)ಗೆ ಉತ್ತರ ಹೇಳಿರುವ ಪ್ರಕಾರ, ಈ ಇಲಾಖೆಯಲ್ಲಿ ಇರತಕ್ಕ ವರ್ಕ್‌ಲೋಡ್‌ಗೆ ಸರಿಯಾಗಿ ಹುದ್ದೆಗಳಿದ್ದರೆ, ಏತಕ್ಕಾಗಿ ಅನೇಕರಿಗೆ ಆ ಹುದ್ದೆಗಳು ಸಿಗಲಿಲ್ಲ?

ಶ್ರೀ ಕೆ. ಲಕ್ಕಪ್ಪ.—ಇನ್ನು ಕೆಲವರಿಗೆ ಅಲ್ಲಿ ಆ ಹುದ್ದೆಗಳು ಸಿಗಲಿಲ್ಲ. ಖಾಲಿಯಾದಾಗ ಅವನ್ನು ಕೊಡುತ್ತೇವೆ. ಈಗ ೭ಕ್ಕೆ ೧ ಪ್ರೊಪೋರ್ಷನ್ ಪ್ರಕಾರ ಕೊಡುತ್ತಿದ್ದೇವೆ. ಖಾಲಿ ಬಿದ್ದಾಗ ಅದನ್ನು ವಿಚಾರಮಾಡುತ್ತೇವೆ.

EXTRA CONCESSION IN ALLOTMENT OF SITES TO SCHEDULED CASTES/SCHEDULED TRIBES PEOPLE BY C.I.T.B.

545. Sri L. SRIKANTAIAH (Nanjangud).—Will the Minister of State for Municipal Administration be pleased to state :—

(*a*) whether the Government has announced extra concessions like 10 per cent reservation in the allotment of sites by City Improvement Trust Board and loans at 3 per cent to the people belonging to Scheduled Castes and Scheduled Tribes ;

(*b*) if so, whether there is any proposal for the same extra concession being extended to the people who are socially and economically backward?

Sri B. M. PATIL (Minister of State for Municipal Administration).—

(*a*) No.

(*b*) Does not arise in view of reply to clause (*a*).

ಶ್ರೀ ಎಲ್. ಶ್ರೀಕಂಠಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಬಹುಶಃ ಇದು ಯಾವಾಗ ಪ್ರಿಂಟ್ ಆಯಿತೋ ಗೊತ್ತಿಲ್ಲ. ಇದೇ ಮಾನ್ಯ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಈ ರೀತಿಯಾಗಿ ರಿಯಾಯತಿಯನ್ನು ಪೆಡ್ಡೊಲ್ಡ್ ಕ್ಯಾಸ್ಟ್ ಮತ್ತು

ಶ್ರೀ ಎಲ್. ಶ್ರೀಕಂಠಯ್ಯ

ಪೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಟ್ಟಿರುವುದು ನಿಜವೆಂದು ಹೇಳಿದ್ದಾರೆ. ಆದ್ದರಿಂದ ಉತ್ತರದಲ್ಲಿ ನಿಜವೆಂದು ಮಾನ್ಯ ಮಂತ್ರಿಗಳು ಹೇಳಿದರೆ ಆಗ ನಾನು ಪ್ರಶ್ನೆ ಹಾಕುತ್ತೇನೆ. ಆದ್ದರಿಂದ ಈಗ ಆ ಪ್ರಕಾರವಾಗಿ ಉತ್ತರ ಕೊಡಲು ಕಾರಣವೇನು?

ಶ್ರೀ ಬಿ.ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ್ದು ನಿಜ. ಈ ಉತ್ತರವನ್ನು ಕೊಡುವಾಗ ಸರ್ಕಾರ ಅದರ ಬಗ್ಗೆ ಇನ್ನೂ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ. ಆಮೇಲೆ ನಿರ್ಧಾರವಾಗಿದೆ. ಶೇಕಡ ೧೦ ರಷ್ಟು ಅವರಿಗೆ ಕೊಡಬೇಕೆಂದು ಟ್ರಸ್ಟ್‌ಬೋರ್ಡಿನ ಅಲಾಟ್‌ಮೆಂಟ್ ರೂಲ್ಸ್‌ನಲ್ಲಿ ಬದಲಾವಣೆ ಆಗದಿದ್ದರೆ, ಅದನ್ನು ಎಫೆಕ್ಟಿಗೆ ಕೊಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತಿದ್ದಾರೆ. ಅವರಿಗೆ ಶೇಕಡ ೩ ರಂತೆ ಚಾರ್ಜ್ ಮಾಡುತ್ತಿದ್ದಾರೆ, ಬೇರೆಯವರಿಗೆ ಶೇಕಡ ೯ ರಷ್ಟು ಚಾರ್ಜ್ ಮಾಡುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ನನಗೆ ಉತ್ತರ ಇವತ್ತು ಬರುತ್ತಿದೆ. ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಎಂಬುದನ್ನು ನೋಡದೆ ನಾನು ಏನು ಪ್ರಶ್ನೆ ಕೇಳುವುದು? ಇವರಲ್ಲಿ ಎಷ್ಟು ನಿರ್ಲಕ್ಷ್ಯವಿದೆ ಯೆಂಬುದು ಇವರ ಉತ್ತರದಲ್ಲಿಯೇ ಕಾಣುತ್ತದೆ. ಇವರು ೧೮ ದಿವಸಗಳ ಮೇಲೆ ಈ ರೀತಿ ಉತ್ತರ ಕೊಟ್ಟಿದ್ದಾರೆ. ಅದು ಸರಿಯೇ?

ಶ್ರೀ ಬಿ.ಎಂ. ಪಾಟೀಲ್.—ಆಗಲೇ ಹೇಳಿದ್ದೇನೆ ಟ್ರಸ್ಟ್‌ಬೋರ್ಡ್ ಅಲಾಟ್‌ಮೆಂಟ್ ರೂಲ್ಸ್‌ನಲ್ಲಿ ಬದಲಾವಣೆ ಮಾಡದೆ ಸರ್ಕಾರದ ಉದ್ದೇಶ ಎಫೆಕ್ಟಿಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಹರಿಜನ, ಗಿರಿಜನರಿಗೆ ಕೊಡುವ ಹಾಗೆ ಹಿಂದುಳಿದ ಪಂಗಡದವರಿಗೂ ಇದೇ ರಿಯಾಯಿತಿಯನ್ನು ಕೊಡುತ್ತೀರಾ?

ಶ್ರೀ ಬಿ.ಎಂ. ಪಾಟೀಲ್.—ಈ ವಿಷಯದಲ್ಲಿ ಸರ್ಕಾರ ಇನ್ನೂ ಏನೂ ನಿರ್ಧಾರ ತೆಗೆದುಕೊಂಡಿಲ್ಲ.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.—ಬೆಂಗಳೂರು ನಗರಾಭಿವೃದ್ಧಿ ಮಂಡಲಿಯಲ್ಲಿ ಯಾವ ರೀತಿ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇಕಡ ೫೦ ರಷ್ಟನ್ನು ಸೈಟ್ ಬೆಲೆಯಲ್ಲಿ ರಿಯಾಯತಿ ಕೊಡುವ ಬಂದು ನೀತಿ ಇದೆಯೋ, ಅದೇ ರೀತಿ ಪೊಲಿಟಿಕಲ್ ಸಫರರ್ಸ್‌ಗೂ ಕೂಡ ಆ ಒಂದು ರಿಯಾಯತಿಯನ್ನು ತೆಗೆದುಹಾಕುತ್ತೀರೋ ಅಥವಾ ಅವರಿಗೂ ಮುಂದುವರಿಸುತ್ತೀರೋ?

ಶ್ರೀ ಬಿ.ಎಂ. ಪಾಟೀಲ್.—ಶೇಕಡ ೫೦ ರಷ್ಟು ರಿಯಾಯತಿ ಅವರಿಗೆ ಕೊಡುತ್ತಿದ್ದಾರೆಂಬ ಬಗೆ ನನ್ನಲ್ಲಿ ವಿವರಗಳು ಇಲ್ಲ. ಅದು ನನ್ನ ಗಮನಕ್ಕೂ ಬಂದಿಲ್ಲ. ಆದರೆ ಪೊಲಿಟಿಕಲ್ ಸಫರರ್ಸ್‌ಗೆ ಶೇಕಡ ೨೫ ರಷ್ಟು ರಿಯಾಯತಿಯನ್ನು ಕೊಡುತ್ತಿದ್ದಾರೆ.

9-00 AM

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್ ಬದಲಾವಣೆ ಮಾಡಿದರೆ ಮಾತ್ರ ಈ ರೀತಿ ಪೆಡ್ಯೂಲ್ ಕ್ಯಾಸ್ಟ್, ಪೆಡ್ಯೂಲ್ ಟ್ರೈಬ್ಸ್‌ಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ. ಈ ರೂಲ್ಸ್ ಎಷ್ಟು ದಿವಸ ದಲ್ಲಿ ಬದಲಾವಣೆ ಮಾಡಿ ಪೆಡ್ಯೂಲ್ ಕ್ಯಾಸ್ಟ್‌ಗೆ ಪೆಡ್ಯೂಲ್ ಟ್ರೈಬ್ಸ್‌ಗೆ ಅನುಕೂಲಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಬಿ. ಎಂ. ಪಾಟೀಲ್.—ಸರ್ಕಾರದ ನಿರ್ಧಾರದ ಪ್ರಕಾರ ಬೇಗನೆ ರೂಲ್ಸ್ ಬದಲಾವಣೆ ಮಾಡುತ್ತೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಹರಿಜನ ಗಿರಿಜನರು ಎಷ್ಟು ಹಿಂದುಳಿದಿದ್ದಾರೋ ಅಷ್ಟೇಮಟ್ಟಿಗೆ ಇತರ ಹಿಂದೂಗಳು, ಮುಸಲ್ಮಾನರು ಹಿಂದೆ ಉಳಿದಿದ್ದಾರೆ ಮತ್ತು ಹೀನ ಸ್ಥಿತಿಯಲ್ಲಿ ಇದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಹರಿಜನರು ಗಿರಿಜನರು ಅಷ್ಟೇ ಅಲ್ಲ ಸಮಾಜದಲ್ಲಿ ಬಡವರು ಮತ್ತು ಇತರರು ಹಿಂದುಳಿದಿರುವವರು ಇದ್ದಾರೆ. ಈ ಸಂಬಂಧದಲ್ಲಿ ಸರ್ಕಾರ ಏನೂ ನಿರ್ಧಾರ ತೆಗೆದುಕೊಂಡಿಲ್ಲ.

ADDITIONAL ACCOMMODATION TO GOVERNMENT HIGH SCHOOL AT HALLIMYSORE.

679. SRI H. D. DEVE GOWDA (Holenarasipur).—Will the Minister for Education be pleased to state:—

(*a*) whether an estimate for the construction of four additional rooms to the Government High School at Hallimysore, Holenarasipur Taluk was submitted by P. W. D. to Government for necessary sanction about three years back;

(*b*) whether it has come to the notice of the Government that the present buildling is not sufficient to accommodate the present strength of students;

(*c*) whether the Government has any proposal before it to sanction the estimate at least during this year ?

SRI N. M. KOTRABASAIAH SOGI (Deputy Minister for Education). —

(*a*) No.

(*b*) No.

(*c*) No.

ಶ್ರೀ ಹೆಚ್. ಡಿ. ದೇವೇಗೌಡ.—ಬಿ. ಪ್ರಶ್ನೆಗೆ ಉತ್ತರವಾಗಿ ನೋ ಎಂದು ಹೇಳಿದ್ದೀರಿ. ನಿಮಗೆ ಯಾವ ತರಹ ಮನವಿಗಳನ್ನು ಮಾಡಿದರೆ ನಿಮ್ಮ ಗಮನಕ್ಕೆ ಬರುತ್ತದೆ ಎಂದು ತಿಳಿಸುತ್ತೀರಾ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಇತ್ತೀಚೆಗೆ ಮಾನ್ಯ ಸದಸ್ಯರು ಮಂತ್ರಿಗಳ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸ್ ತರಿಸಿಕೊಳ್ಳಲಿಕ್ಕೆ ಪ್ರಯತ್ನ ನಡೆದಿದೆ. ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸ್ ಬಂದಕೂಡಲೇ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಕಾಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಡಿ. ದೇವೆಗೌಡ.—ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿ ಹೇಗಿದೆ ಎನ್ನುವುದು ಗೊತ್ತಿದೆ. ೨೯೦ ಹುಡುಗರು ಶಾಲೆಯಲ್ಲಿ ಇದ್ದಾರೆ. ಇದು ಗೌವರ್ನಮೆಂಟ್ ಹೈಸ್ಕೂಲು ಬಹಳ ವರ್ಷದಿಂದ ಇದಕ್ಕೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಪ್ಲಾನ್ಸ್ ಅಂಡ್ ಎಸ್ಟಿಮೇಟ್ ಬಾದ ಕೂಡಲೇ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.